GLB - 3160

# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಜಿಎಲ್‌ಬಿ-3160/2014/ಡಿಆರ್‌ಇ-1

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ: 26/02/2018

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀ.ವೆಂಕಟೇಶ್ವರಲು, ಕೌಲ್ ಬಜಾರ್, ಬಳ್ಳಾರಿ, ಇವರು ಸಲ್ಲಿಸಿರುವ ದೂರಿನ ಸಂಬಂಧ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ವರದಿಯನ್ವಯ ಕ್ರಮ ಕೈಗೊಳ್ಳುವ ಬಗ್ಗೆ.

******

1) ಶ್ರೀ.ವೆಂಕಟೇಶ್ವರಲು ಬಿನ್ ಎನ್.ಪಚ್ಚಪಿಳ್ಳೈ, ನಂ.110, ಎ.ಕೆ.ಆಜಾದ್‌ನಗರ, ಸರ್ಕಾರಿ ರೇಷ್ಮೆ ಕಂಪನಿ ಎದುರುಗಡೆ, ಕೌಲ್ ಬಜಾರ್, ಬಳ್ಳಾರಿ, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ರವರು (1) ಶ್ರೀ.ಕೆ.ಜಿ.ವಿ.ಗಂಗಾಧರಗೌಡ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ (ನಿರ್ವಹಣೆ) ಉಪ ವಿಭಾಗ, ಕೋಟೆ, ಬಳ್ಳಾರಿ, ಮತ್ತು (2) ಶ್ರೀ.ಸಿ.ರಘುನಾಥ, ದ್ವಿತೀಯ ದರ್ಜೆ ಸಹಾಯಕರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ (ನಿರ್ವಹಣೆ) ಉಪ ವಿಭಾಗ, ಕೋಟೆ, ಬಳ್ಳಾರಿ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2) ದೂರುದಾರರು ತಮ್ಮ ದೂರಿನಲ್ಲಿ ಅವರು 2007 ರಿಂದ ದಿ.4/4/14 ರವರೆಗೆ ಟಾಸ್ಕ್ ವರ್ಕ್ ಆಧಾರದ ಮೇಲೆ ಲ್ಯಾಬ್ ಟೆಕ್ನಿಷಿಯನ್ ಆಗಿ ಕೆಲಸ ನಿರ್ವಹಿಸಿರುತ್ತಾರೆ. ದಿ.4/4/14 ರಂದು ಕಚೇರಿಯಲ್ಲಿ ವರದಿಯನ್ನು ತಯಾರಿಸುತ್ತಿದ್ದಾಗ, ರಘುನಾಥ್ ಇವರು ಮಧ್ಯೆ ಪ್ರವೇಶಿಸಿ ಅವಾಚ್ಯ ಶಬ್ದಗಳಿಂದ ಬೈದು ಹೊಡೆದಿರುತ್ತಾರೆ. ದಿ.5/4/14 ರಿಂದ ಕೆಲಸಕ್ಕೆ ಬೇಡವೆಂದು ಶಾಖಾಧಿಕಾರಿಗಳಾದ ಕೆ.ರಾಜು, ಸಹಾಯಕ ಅಭಿಯಂತರರು ತಿಳಿಸಿರುತ್ತಾರೆ. ಅದರಂತೆ ಅವರು ಕೆಲಸಕ್ಕೆ ಹೋಗಿರುವುದಿಲ್ಲ. ಈ ಬಗ್ಗೆ ಜಿಲ್ಲಾಧಿಕಾರಿಗಳು, ಬಳ್ಳಾರಿ, ಪೊಲೀಸ್ ವರಿಷ್ಠಾಧಿಕಾರಿ, ಬಳ್ಳಾರಿ, ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ಇವರಿಗೆ ದೂರನ್ನು ನೀಡಿರುತ್ತಾರೆ. ನಂತರ ರಘುನಾಥ್ ಇವರು ದೂರುದಾರರ ತಂಟೆಗೆ ಬರುವುದಿಲ್ಲವೆಂದು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತಾರೆ. ದಿ.4/4/14 ರಂದು ಅಶ್ಲೀಲ ವೆಬ್‌ಸೈಟನ್ನು ಉಪ ವಿಭಾಗಾಧಿಕಾರಿಗಳ ಕಚೇರಿಯಲ್ಲಿ ದೂರುದಾರರು ವೀಕ್ಷಿಸಿರುತ್ತಾರೆಂದು ರಘುನಾಥ್ ಇವರು ಕಂಪ್ಲೆಂಟ್ ಮಾಡಿರುತ್ತಾರೆ. ದುರುದ್ದೇಶದಿಂದ ಆ ರೀತಿಯ ಕಂಪ್ಲೆಂಟನ್ನು ನೀಡಿರುತ್ತಾರೆ. ನಂತರ ಕೆ.ರಾಜು

4

ಮತ್ತು ಆರ್.ಜಿ.ಪಂಚಮುಖಿ, ಸಹಾಯಕ ಅಭಿಯಂತರರು ಮತ್ತು ಕೆ.ಜಿ.ವಿ.ಗಂಗಾಧರ ಗೌಡ, ಸಹಾಯಕ ಕಾರ್ಯಪಾಲಕ ಅಭಿಯಂತರರು ದೂರುದಾರರ ಮೇಲೆ ಕಂಪ್ಲೆಂಟ್ ಮಾಡಿ ದಿ.5/4/14 ರಿಂದ ದೂರುದಾರರೇ ಕೆಲಸಕ್ಕೆ ಬಂದಿಲ್ಲವೆಂದು ಮತ್ತು ದೂರವಾಣಿಯಲ್ಲಿ ಸಂಪರ್ಕಕ್ಕೆ ಸಿಕ್ಕಿಲ್ಲವೆಂದು ಸುಳ್ಳು ಆಪಾದನೆ ಮಾಡಿ ತೊಂದರೆಯನ್ನು ನೀಡಿರುತ್ತಾರೆ. ಸದರಿಯವರು ಹಲವಾರು ಅಕ್ರಮಗಳಲ್ಲಿ ಭಾಗಿಯಾಗಿರುತ್ತಾರೆ. ಆದ್ದರಿಂದ, ಸದರಿಯವರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ದೂರನ್ನು ಸಲ್ಲಿಸಿರುತ್ತಾರೆ.

3) ದೂರುದಾರರ ದೂರಿನ ಮೇಲೆ ಆಕ್ಷೇಪಣೆ ಸಲ್ಲಿಸುವಂತೆ ಎದುರುದಾರರಿಗೆ ಆದೇಶಿಸಲಾಗಿತ್ತು. 1 ಮತ್ತು 2ನೇ ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ದಿ.4/4/2014 ರಂದು ಶ್ರೀ.ರಘುನಾಥ್ ಇವರು ಕಂಪ್ಯೂಟರ್ ರೂಂನಲ್ಲಿ ಶ್ರೀ.ವೆಂಕಟೇಶ್ವರಲು ಯಾರೂ ಇಲ್ಲದ ಸಮಯದಲ್ಲಿ ಕಂಪ್ಯೂಟರನ್ನು ಬಳಸುತ್ತಿರುವುದನ್ನು ಕೇವಲ ಪ್ರಶ್ನಿಸಲಾಗಿದ್ದು, ಈ ಹಿಂದೆ ಕಂಪ್ಯೂಟರ್ ಹಾರ್ಡ್ ಡಿಸ್ಕ್ ಹಾಳಾಗಿದ್ದ ಹಿನ್ನೆಲೆಯಲ್ಲಿ ಈರೀತಿಯಾಗಿ ತಿಳಿಸಿರುವುದಾಗಿ, ಸಂಬಂಧಪಟ್ಟ ಶಾಖಾಧಿಕಾರಿಗಳು ವರದಿ ಮಾಡಿರುವಂತೆ ಮತ್ತು ಶ್ರೀ.ವೆಂಕಟೇಶ್ವರಲು ಅವರಿಗೆ ಕಂಪ್ಯೂಟರ್‌ನಲ್ಲಿ ಯಾವುದೇ ವಿವರಗಳನ್ನು ಎಂಟ್ರಿ ಮಾಡಲು ತಿಳಿಸಿಲ್ಲ ಅಥವಾ ಇಂತಹ ಡಾಟಾ ಕೂಡ ಯಾವುದೂ ಇರುವುದಿಲ್ಲವೆಂದು ತಿಳಿಸಿದ ವರದಿ ಆಧಾರದಲ್ಲಿ ಶ್ರೀ.ಎಂ.ಪಿ.ವೆಂಕಟೇಶ್ವರಲು ಇವರು ದೂರಿನಲ್ಲಿ ತಿಳಿಸಿದಂತೆ ಲ್ಯಾಬೊರೇಟರಿ ಡಾಟಾ ಎಂಟ್ರಿ ಮಾಡುತ್ತಿರುವುದಿಲ್ಲವೆಂದು ಸ್ಪಷ್ಟವಾಗಿರುತ್ತದೆ. ಶ್ರೀ.ರಘುನಾಥ್ ಇವರು ದೂರುದಾರರನ್ನು ಪ್ರಶ್ನಿಸಿದಕ್ಕಾಗಿ ದಿ.5/4/14 ರಂದು ಗೇಟಿನ ಹೊರಗಡೆ ಸ್ವಲ್ಪ ಮುಂದೆ ಹಲ್ಲೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದಿರುವುದು ಸಿಬ್ಬಂದಿ ವರ್ಗದವರಿಂದ ಮತ್ತು ಶಾಖಾಧಿಕಾರಿಗಳಿಂದ ಸ್ಪಷ್ಟವಾಗಿರುತ್ತದೆ. ಅವರ ಸಮಕ್ಷಮ ದೂರುದಾರರು ತಾನು ಮಾಡಿದ್ದು ತಪ್ಪಾಗಿದೆಯೆಂದು ಒಪ್ಪಿಕೊಂಡು, ಅಂದಿನಿಂದ ಕೆಲಸಕ್ಕೆ ಬಾರದೆ, ಸುಮಾರು 10 ದಿನಗಳ ನಂತರ ತನ್ನ ತಪ್ಪನ್ನು ಮರೆಮಾಚಲು ದೂರನ್ನು ನೀಡಿರುತ್ತಾರೆಂಬುದು ಸ್ಪಷ್ಟವಾಗುತ್ತದೆ. ದೂರುದಾರರನ್ನು ಗುತ್ತಿಗೆದಾರರು ಕೆಲಸಕ್ಕೆ ನೇಮಿಸಿಕೊಂಡಿದ್ದು, ಮಂಡಳಿಯಿಂದ ಕೆಲಸಕ್ಕೆ ನೇಮಿಸಿಕೊಂಡಿರುವುದಿಲ್ಲ. ಆದ್ದರಿಂದ, ಅವರನ್ನು ತೆಗೆದುಕೊಳ್ಳುವ ಅಥವಾ ನಿರಾಕರಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ದೂರುದಾರರು ನೀಡಿರುವ ದೂರು ಸತ್ಯಕ್ಕೆ ದೂರವಾದುದು, ನಿರಾಧಾರವಾದುದು, ದುರುದ್ದೇಶದಿಂದ ಕೂಡಿರುತ್ತದೆ ಮತ್ತು ಮಾನಸಿಕ ಹಿಂಸೆ ನೀಡಲು ನೀಡಿರುವ ದೂರಾಗಿರುತ್ತದೆಯೆಂದು ತಮ್ಮ ಆಕ್ಷೇಪಣೆಯಲ್ಲಿ ತಿಳಿಸಿರುತ್ತಾರೆ.

4) ಎದುರುದಾರರ ಆಕ್ಷೇಪಣೆಯ ಮೇಲೆ ದೂರುದಾರರು ಪ್ರತ್ಯುತ್ತರವನ್ನು ಸಲ್ಲಿಸಿದ್ದು, ಪ್ರತ್ಯುತ್ತರದಲ್ಲಿ ಎದುರುದಾರರು ದೂರುದಾರರ ವಿರುದ್ಧ ಮೇಲಾಧಿಕಾರಿಗಳಿಗೆ ಸುಳ್ಳು ದೂರನ್ನು ನೀಡಿ, ಆ ಕಾರಣದಿಂದ ದೂರುದಾರರನ್ನು ಕೆಲಸದಿಂದ ವಜಾ ಮಾಡಿದ್ದು, ನಂತರದಲ್ಲಿ ದೂರುದಾರರು ಎದುರುದಾರರ ವಿರುದ್ಧ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ, ಪೊಲೀಸ್ ಅಧೀಕ್ಷಕರಿಗೆ, ಮಾನವ ಹಕ್ಕು ಆಯೋಗಕ್ಕೆ ಹಾಗೂ ಸಚಿವರಿಗೆ ದೂರನ್ನು ನೀಡಿರುತ್ತಾರೆ. ಎದುರುದಾರರು ದೂರುದಾರರಿಗೆ ಬೆದರಿಕೆ ಹಾಕಿರುತ್ತಾರೆಂದು ಹೇಳಿರುತ್ತಾರೆ.

ಆದ್ದರಿಂದ, ದೂರುದಾರರ ದೂರಿನ ಮೇಲೆ ತನಿಖೆ ನಡೆಸಿ ವರದಿ ನೀಡುವಂತೆ ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬಳ್ಳಾರಿ ಇವರಿಗೆ ಆದೇಶಿಸಲಾಗಿತ್ತು.

5) ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬಳ್ಳಾರಿ ಇವರು ವರದಿಯನ್ನು ಸಲ್ಲಿಸಿದ್ದು, ವರದಿಯಲ್ಲಿ ಈ ಕೆಳಗಿನಂತೆ ಅಭಿಪ್ರಾಯ ನೀಡಿರುತ್ತಾರೆ.

> *"ದೂರು ಅರ್ಜಿಯ ಅರ್ಜಿದಾರರು ಮತ್ತು ಶ್ರೀ.ಸಿ.ರಘುನಾಥ, ದ್ವಿತೀಯ ದರ್ಜೆ ಸಹಾಯಕ ಇವರ ಮಧ್ಯೆ ಕಂಪ್ಯೂಟರ್‌ನ್ನು ಉಪಯೋಗಿಸುವ ಸಂಬಂಧ ದಿ.4/4/14 ರಂದು ಬಾಯಿ ಮಾತಿನ ಜಗಳವಾಗಿರುವುದು ನಿಜವಿರುತ್ತದೆ. ಈ ಬಾಯಿ ಮಾತಿನ ಜಗಳದ ಸಂಬಂಧ ಅರ್ಜಿದಾರರು ಮಾನ್ಯ ಪೊಲೀಸ್ ಅಧೀಕ್ಷಕರು, ಬಳ್ಳಾರಿ ಜಿಲ್ಲೆ, ಬಳ್ಳಾರಿರವರಿಗೆ ನೀಡಿದ ದೂರು ಅರ್ಜಿಯಂತೆ ಕೌಲ್‌ಬಜಾರ್ ಪೊಲೀಸ್ ಠಾಣೆಯಲ್ಲಿ ಅರ್ಜಿ ವಿಚಾರಣೆಯಾಗಿದ್ದು, ಪೊಲೀಸ್ ಇನ್ಸ್‌ಪೆಕ್ಟರ್‌ರವರು ಪ್ರತಿವಾದಿಯನ್ನು ಕರೆಯಿಸಿ, ಅರ್ಜಿದಾರರ ತಂಟೆ ತಕರಾರಿಗೆ ಬಾರದಂತೆ ಸೂಕ್ತ ತಿಳುವಳಿಕೆ ನೀಡಿ, ಅರ್ಜಿದಾರರ ಹೇಳಿಕೆಯಂತೆ ಅರ್ಜಿಯನ್ನು ಮುಕ್ತಾಯ ಮಾಡಿರುವುದು ವಿಚಾರಣಾ ಸಮಯದಲ್ಲಿ ತಿಳಿದುಬಂದಿರುತ್ತದೆ.*
>
> *ಸಿ.ರಘುನಾಥ, ದ್ವಿತೀಯ ದರ್ಜೆ ಸಹಾಯಕರವರು ಸ್ಥಿರಾಸ್ತಿ ಮತ್ತು ಚರಾಸ್ತಿಗಳನ್ನು ತನ್ನ ಹಾಗೂ ತನ್ನ ಹೆಂಡತಿಯ ಹೆಸರಿನಲ್ಲಿ ಖರೀದಿಸಲು ಅವರ ಸಕ್ಷಮ ಪ್ರಾಧಿಕಾರಿಯಿಂದ ಇಲಾಖಾ ಪರವಾನಗೆಗಳನ್ನು ಪಡೆದುಕೊಂಡಿರುವುದಿಲ್ಲ ಎಂದು ವಿಚಾರಣೆ ಸಮಯದಲ್ಲಿ ಸಾಬೀತಾಗಿರುತ್ತದೆ. ಆದಪ್ರಯುಕ್ತ, ಸಿ.ರಘುನಾಥ, ದ್ವಿತೀಯ ದರ್ಜೆ ಸಹಾಯಕರ ವಿರುದ್ಧ ಸೂಕ್ತ ಕ್ರಮಕ್ಕಾಗಿ ಶಿಫಾರಸ್ಸು ಮಾಡಲಾಗಿದೆ.*
>
> *ಇನ್ನುಳಿದಂತೆ ಅರ್ಜಿದಾರರು ಅರ್ಜಿಯಲ್ಲಿ ಮಾಡಿರುವ ಇತರೆ ಆರೋಪಗಳನ್ನು ಸಾಬೀತು ಮಾಡುವ ಸೂಕ್ತ ಸಾಕ್ಷ್ಯಾಧಾರಗಳು ವಿಚಾರಣೆ ಸಮಯದಲ್ಲಿ ಲಭ್ಯವಾಗಿರುವುದಿಲ್ಲ" ಎಂದು ವರದಿ ನೀಡಿರುತ್ತಾರೆ.*

6) ತನಿಖಾಧಿಕಾರಿಯ ವರದಿಯ ಮೇಲೆ 2ನೇ ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿದ್ದು, ಆಕ್ಷೇಪಣೆಯಲ್ಲಿ ಬಳ್ಳಾರಿ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವಿಭಾಗ, ಬಳ್ಳಾರಿ ಇವರು ನೀಡಿದ ಹೇಳಿಕೆಯ ಆಧಾರದಲ್ಲಿ ಸಾಬೀತಾಗಿದೆಯೆಂದು ವರದಿಯಲ್ಲಿ ನಮೂದಿಸಲಾಗಿದೆ. ಸತ್ಯಾಂಶಗಳಿಲ್ಲದೆ 1998 ರಿಂದ 2005 ರವರೆಗೆ ಬಳ್ಳಾರಿ ವಿಭಾಗದಲ್ಲಿ ಪ್ರತಿ ನಿಯೋಜನೆ ಆಧಾರದಲ್ಲಿ ಕೆಲವು ವರ್ಷ ಮತ್ತು ಹೊಸಪೇಟೆ ಉಪ ವಿಭಾಗದಲ್ಲಿ ಕೆಲವು ವರ್ಷ ಕಾರ್ಯ ನಿರ್ವಹಿಸಿರುತ್ತಾರೆ. ನಂತರ 2005 ರಿಂದ ಗುಲ್ಬರ್ಗಕ್ಕೆ ವರ್ಗಾವಣೆಯಾಗಿ 2007 ರಲ್ಲಿ ವಾಪಸ್ಸು ಬಳ್ಳಾರಿಗೆ ಬಂದಿರುತ್ತಾರೆ. ಆ ಸಂದರ್ಭದಲ್ಲಿ ಬಳ್ಳಾರಿ ಕಾರ್ಯಪಾಲಕ ಅಭಿಯಂತರರು, ಸಕ್ಷಮ ಪ್ರಾಧಿಕಾರವಾಗದಿದ್ದರೂ ಆ ಬಗ್ಗೆ ಹೇಳಿಕೆ ನೀಡಿರುತ್ತಾರೆ. ಇದು ಅವರು ತರಾತುರಿಯಲ್ಲಿ ಪರಿಶೀಲನೆ ನಡೆಸದೆ,

ವಿವರಗಳನ್ನು ಪಡೆಯದೆ, ದಾಖಲೆಗಳನ್ನು ಪರಿಶೀಲಿಸದೆ ನೀಡಿದ ಹೇಳಿಕೆ ಅಥವಾ ವರದಿಯಾಗಿರುತ್ತದೆ. 2ನೇ ಎದುರುದಾರರ ಪತ್ನಿ ಶ್ರೀಮತಿ.ವಿನಯ ಇವರು ವಿಜಯನಗರ ವೈದ್ಯಕೀಯ ಮಹಾ ಸಂಸ್ಥೆಯಲ್ಲಿ ಕಳೆದ 10 ವರ್ಷಗಳಿಂದ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದಾರೆ. ಅದಕ್ಕೂ ಮುಂಚೆ ಬಳ್ಳಾರಿ ಪಾಲಿಟೆಕ್ನಿಕ್‌ನಲ್ಲಿ ಗುತ್ತಿಗೆ ಆಧಾರದಲ್ಲಿ ಬೋಧಕರಾಗಿ ಕೆಲಸ ಮಾಡುತ್ತಿದ್ದರು. ಅದಕ್ಕೂ ಮುಂಚೆ ಶಾತವಾಹನ ಇಸ್ಪತ್ ಅಲಾಯಿಸ್ ಲಿಮಿಟೆಡ್‌ನಲ್ಲಿ ಕಂಪ್ಯೂಟರ್ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದರು. 1994 ರ ಮುಂಚೆ ಮಂಗಳೂರು ಮತ್ತು ಮೈಸೂರಿನಲ್ಲಿ ಕಂಪ್ಯೂಟರ್ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದರು. ಅವರು ಕಂಪ್ಯೂಟರ್‌ನಲ್ಲಿ ಪರಿಣತಿ ಹೊಂದಿರುತ್ತಾರೆ. ಅವರು ಎದುರುದಾರರಿಗೆ ಅವಲಂಬಿತರಾಗಿರುವುದಿಲ್ಲ. ಅವರಿಗೆ ಅವರದೇ ಆದ ಆದಾಯವಿದ್ದು, ಅವರ ಸ್ವಆದಾಯದಿಂದ ಆಸ್ತಿಯನ್ನು ಖರೀದಿಸಿರುತ್ತಾರೆ. 2001 ರಿಂದ ಇಲ್ಲಿಯವರೆಗೂ ಆದಾಯ ತೆರಿಗೆ ರಿಟರ್ನ್ಸ್‌ನ್ನು ಸಲ್ಲಿಸುತ್ತಿದ್ದಾರೆ. ಬಳ್ಳಾರಿ ನಗರದ ಶಂಕರ್ ಕಾಲೋನಿಯಲ್ಲಿರುವ ಮನೆಯನ್ನು ಖರೀದಿಸಲು ದಿ.26/10/1999 ರಂದು ಅಲ್ಲಿನ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಇವರಿಗೆ ಮಾನ್ಯ ಕಾರ್ಯಪಾಲಕ ಅಭಿಯಂತರರ ಮುಖಾಂತರ ಮನೆ ಖರೀದಿಸಲು ಅನುಮತಿ ನೀಡಬೇಕೆಂದು ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿ ಸಲ್ಲಿಸಿದ 3 ತಿಂಗಳುಗಳ ನಂತರ ಅವರ ಪತ್ನಿಯ ಹೆಸರಿನಲ್ಲಿ ಮನೆಯನ್ನು ಖರೀದಿಸಲಾಗಿರುತ್ತದೆ. 1ನೇ ಮಹಡಿಯನ್ನು 2003 ರಲ್ಲಿ ಎದುರುದಾರರ ಪತ್ನಿ ಅವರ ಆದಾಯದಿಂದ ನಿರ್ಮಾಣ ಮಾಡಿದ್ದು, 2003 ರಲ್ಲಿ ರೂ.3 ಲಕ್ಷ ಸಾಲವನ್ನು ವಿಜಯಾ ಬ್ಯಾಂಕ್‌ನಿಂದ ಪಡೆದು ಮೊದಲ ಮಹಡಿಯನ್ನು ಕಟ್ಟಲು ಪ್ರಾರಂಭಿಸಿ, 2004 ರ ಮೊದಲಿನಲ್ಲಿ ಮುಕ್ತಾಯಗೊಳಿಸಿದೆ. ಅದಕ್ಕೆ ಒಟ್ಟು ರೂ.4.50 ಲಕ್ಷ ಖರ್ಚಾಗಿರುತ್ತದೆ. ಅವರು ಯಾವುದೇ ನಿಯಮಾವಳಿಗಳನ್ನು ಉಲ್ಲಂಘಿಸಿರುವುದಿಲ್ಲ ಎಂದು ಹೇಳಿರುತ್ತಾರೆ.

7) 2ನೇ ಎದುರುದಾರರು ಆಕ್ಷೇಪಣೆಯ ಜೊತೆ ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಿದಾಗ, ದಿ.25/10/1999 ರಂದು ಮನೆಯನ್ನು ಖರೀದಿಸಲು ಅನುಮತಿ ನೀಡುವಂತೆ ಕೋರಿ 2ನೇ ಎದುರುದಾರರು ಆಡಳಿತ ವ್ಯವಸ್ಥಾಪಕರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಇವರಿಗೆ ಕಳುಹಿಸಿರುವ ಪತ್ರದ ಪ್ರತಿಯನ್ನು ಹಾಜರು ಪಡಿಸಿರುತ್ತಾರೆ. ನಂತರ ದಿ.27/1/2000 ರಂದು ಮನೆಯನ್ನು ಖರೀದಿಸಿರುವ ಬಗ್ಗೆ ನೋಂದಾಯಿತ ಕ್ರಯಪತ್ರದ ಪ್ರತಿಯನ್ನು ಹಾಜರು ಪಡಿಸಿರುತ್ತಾರೆ. ಅದನ್ನು ಗಮನಿಸಿದಾಗ, ಮನೆಯನ್ನು ಖರೀದಿಸುವ ಮೊದಲು ಇಲಾಖಾ ಅನುಮತಿ ಪಡೆಯಲು 2ನೇ ಎದುರುದಾರರು ಪತ್ರವನ್ನು ಕಳುಹಿಸಿಕೊಟ್ಟಿರುವುದು ಕಂಡುಬರುತ್ತದೆ.

2ನೇ ಎದುರುದಾರರ ಪತ್ನಿಯ ಹೆಸರಿನಲ್ಲಿ ಪತ್ನಿಯ ಆದಾಯದಿಂದ ಜಮೀನುಗಳನ್ನು ಖರೀದಿ ಮಾಡಲಾಗಿದೆಯೆಂದು ತಿಳಿಸಿದ್ದು, 2ನೇ ಎದುರುದಾರರ ಪತ್ನಿ ಇನ್‌ಕಂ ಟ್ಯಾಕ್ಸ್ ರಿಟರ್ನ್ಸ್‌ನ್ನು ಸಲ್ಲಿಸಿದ ಬಗ್ಗೆ ರಿಟರ್ನ್ಸ್ ಪ್ರತಿಗಳನ್ನು ಹಾಜರು ಪಡಿಸಿರುತ್ತಾರೆ. ಅದನ್ನು ಪರಿಶೀಲಿಸಿದಾಗ, 2ನೇ ಎದುರುದಾರರ ಹೆಂಡತಿ ಆದಾಯ ತೆರಿಗೆ ರಿಟರ್ನ್ಸ್‌ನ್ನು ಸಲ್ಲಿಸುತ್ತಿರುವ ಅಂಶ ಕಂಡುಬರುತ್ತದೆ. ಮನೆಯನ್ನು ಖರೀದಿಸಿರುವ ಬಗ್ಗೆ 2002, 2003 ರ ಆದಾಯ ಮತ್ತು ದಾಯಿತ್ವ ಪಟ್ಟಿಯಲ್ಲಿ

ನಮೂದು ಮಾಡಿರುವುದು ಕಂಡುಬರುತ್ತದೆ. 2ನೇ ಎದುರುದಾರರ ಪತ್ನಿ ವಿಜಯಾ ಬ್ಯಾಂಕ್, ಬಳ್ಳಾರಿಯಿಂದ ದಿ.22/9/2003 ರಂದು ರೂ.3 ಲಕ್ಷ ಗೃಹಸಾಲವನ್ನು ಪಡೆದಿರುವುದು ಹಾಗೂ ಸದರಿ ಸಾಲವನ್ನು ದಿ.25/4/13 ರೊಳಗೆ ಮರುಪಾವತಿ ಮಾಡಿರುವ ಬಗ್ಗೆ ವಿಜಯಾ ಬ್ಯಾಂಕ್‌ರವರು ದೃಢೀಕರಣ ಪತ್ರವನ್ನು ನೀಡಿರುವುದು ಕಂಡುಬರುತ್ತದೆ. ಅದೇರೀತಿ ದಿ.26/12/2003 ರಂದು 2ನೇ ಎದುರುದಾರರು ವಿಜಯಾ ಬ್ಯಾಂಕ್‌ನಿಂದ ರೂ.50,000/- ಸಾಲವನ್ನು ಪಡೆದಿರುವುದು ಕಂಡುಬರುತ್ತದೆ. ಆದರೆ 2ನೇ ಎದುರುದಾರರು ತನ್ನ ಆಕ್ಷೇಪಣೆಯ ಜೊತೆ ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಿದಾಗ, 2ನೇ ಎದುರುದಾರರ ಪತ್ನಿ ಸರ್ಕಾರಿ ಪಾಲಿಟೆಕ್ನಿಕ್ ಬಳ್ಳಾರಿಯಲ್ಲಿ ಮಾಸಿಕ ರೂ.1,500/- ಸಂಬಳಕ್ಕೆ ಕರ್ತವ್ಯ ನಿರ್ವಹಿಸಿರುವ ಅಂಶ ಕಂಡುಬರುತ್ತದೆ. ಸದರಿಯವರು ಆದಾಯ ತೆರಿಗೆ ಇಲಾಖೆಗೆ ಸಲ್ಲಿಸಿದ ರಿಟರ್ನ್ಸ್‌ನಲ್ಲಿ ಅವರ ವಾರ್ಷಿಕ ಆದಾಯ ರೂ.ಒಂದು ಲಕ್ಷಕ್ಕಿಂತ ಇರುವುದು ಕಂಡುಬರುತ್ತದೆ. ಆದ್ದರಿಂದ, ಸದರಿ ಆದಾಯದಲ್ಲಿ ಅವರು ನಿವೇಶನ ಮತ್ತು ಜಮೀನನ್ನು ಖರೀದಿಸಿರುವ ಬಗ್ಗೆ ಅನುಮಾನಗಳು ಉಂಟಾಗುತ್ತದೆ.

8) ಮೇಲಿನ ಎಲ್ಲಾ ಅಂಶಗಳನ್ನು ಹಾಗೂ ಕಡತದಲ್ಲಿರುವ ದಾಖಲಾತಿಗಳನ್ನು ಪರಿಶೀಲಿಸಿದಾಗ, ಎದುರುದಾರರು ಅಧಿಕಾರ ದುರುಪಯೋಗ ಪಡಿಸಿಕೊಂಡು, ಅಕ್ರಮ ಆಸ್ತಿಯನ್ನು ಹೊಂದಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಅವರು ಭ್ರಷ್ಟಾಚಾರದಲ್ಲಿ ತೊಡಗಿರುತ್ತಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

9) ಮೇಲ್ಕಂಡ ಹಿನ್ನೆಲೆಯಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಎದುರುದಾರರು ತನ್ನ ಅಧಿಕಾರ ದುರುಪಯೋಗ ಪಡಿಸಿಕೊಂಡು ಅಕ್ರಮ ಆಸ್ತಿಯನ್ನು ಹೊಂದಿರುವ ಬಗ್ಗೆ ಕಾನೂನು ರೀತ್ಯ ಕ್ರಮ ಕೈಗೊಳ್ಳಲು **ಭ್ರಷ್ಟಾಚಾರ ನಿಗ್ರಹ ದಳ,** ಇವರಿಗೆ ನಿರ್ದೇಶನ ನೀಡಲು ಈ ಮೂಲಕ ಶಿಫಾರಸ್ಸು ಮಾಡಲಾಗಿರುತ್ತದೆ. ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ **ಒಂದು ತಿಂಗಳೊಳಗೆ** ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

26.2.18

(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
ಉಪಲೋಕಾಯುಕ್ತರು-2,
ಕರ್ನಾಟಕ ರಾಜ್ಯ, ಬೆಂಗಳೂರು.

26/2